ಅಸಲು ದಾವಾ ಸಂಖ್ಯೆ- 165/2019
ಪಿಡಬ್ಲ್ಯೂ- 01
ದಿನಾಂಕಃ 09.02.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು - ಶ್ರೀ ಪಿ ಆರ್ ಕೆ ವಕೀಲರಿಂದ.**

ಸರ್ವೆ ನಂ.98 ರಲ್ಲಿ ಒಟ್ಟು ಕ್ಷೇತ್ರ ಎಷ್ಟು ಇದೆ ನನಗೆ ಗೊತ್ತಿಲ್ಲ . ಸರ್ವೆ ನಂ.98 ರಲ್ಲಿ ಒಟ್ಟು 6 ಹಿಸ್ಸಾಗಳು ಇವೆ. 1 ನೇ ಹಿಸ್ಸೆದಲ್ಲಿ 1 ನೇ ಪ್ರತಿವಾದಿ ಇದ್ದಾರೆ. 2 ನೇ ಹಿಸ್ಸಾದಲ್ಲಿ 2 ನೇ ಪ್ರತಿವಾದಿ ಇದ್ದಾರೆ. 3 ನೇ ಹಿಸ್ಸಾದಲ್ಲಿ 3 ನೇ ಪ್ರತಿವಾದಿ. 4 ನೇ ಹಿಸ್ಸಾದಲ್ಲಿ 4 ನೇ ಪ್ರತಿವಾದಿ ಇರುತ್ತಾರೆ. 5 ನೇ ಹಿಸ್ಸಾದವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 6 ನೇ ಹಿಸ್ಸಾ ನಮಗೆ ಸೇರಿದ್ದು. ಸರ್ವೆ ನಂ.98 ರಲ್ಲಿ 7 ಮತ್ತು 8 ನೇ ಹಿಸ್ಸಾಗಳು ಇವೆ ಎಂದರೆ ಸರಿ. ನಿಪಿ-6 ರಲ್ಲಿ ಹಿಸ್ಸಾ ನಂಬರು 7 ಮತ್ತು 8 ರ ಕುರಿತು ಉಲ್ಲೇಖ ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆ ಹಿಸ್ಸಾಗಳು ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಹಿಸ್ಸಾ ನಂ.7 ರ ಮಾಲಕರ ಹೆಸರು ಗಂಗವ್ವ ಲಮಾಣಿ ಎಂದರೆ ಸರಿಯಲ್ಲ. ಗಂಗವ್ವ ಲಮಾಣಿ ಇವರ ಆಸ್ತಿ ಅಲ್ಲಿ ಇಲ್ಲ. ಅದೇ ರೀತಿ ಮಹಾದೇವಪ್ಪ ಲಮಾಣಿ ಎನ್ನುವವರಿಗೆ ಸೇರಿದ ಆಸ್ತಿ ಸರ್ವೆ ನಂ.98 ರಲ್ಲಿ ಇದೆ ಎಂದರೆ ಸರಿಯಲ್ಲ. ನಮ್ಮ ಆಸ್ತಿ V ಅಕ್ಷರದ ಆಕಾರದಲ್ಲಿ ಇದೆ ಎಂದರೆ ಸರಿಯಲ್ಲ. ನನ್ನ ಆಸ್ತಿ ಸರ್ವೆ ನಂ.98 ರ ಪೂರ್ವ ಮತ್ತು ದಕ್ಷಿಣಕ್ಕೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಪೂರ್ವಕ್ಕೆ ಇದೆ ಎಂದು ನುಡಿಯುತ್ತಾರೆ. ದಾವಾ ಜಮೀನನ್ನು 2018 ರಲ್ಲಿ ಅಳತೆ ಮಾಡಿದ್ದಾರೆ. ದಿನಾಂಕ ಮತ್ತು ತಿಂಗಳು ನೆನಪಿಲ್ಲ. ಮೋಜಣಿದಾರರು ಚಿಕ್ಕಮುಗದೂರು ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ಅವರ ಹೆಸರು ಸಹ ನನಗೆ ಗೊತ್ತಿಲ್ಲ. ಮೋಜಣಿದಾರರು ನಮ್ಮ ಹತ್ತಿರದ ಸಂಬಂಧಿಕರು ಎಂದರೆ ಸರಿಯಲ್ಲ. ದಾವಾ ಜಮೀನನ್ನು ಅಳತೆ ಮಾಡುವ ಕಾಲಕ್ಕೆ ಎಲ್ಲಾ ಹಿಸ್ಸಾದಾರರು ಇದ್ದರು. ಅಳತೆಯನ್ನು ಯಾವ ದಿಕ್ಕಿನಿಂದ ಪ್ರಾರಂಭ ಮಾಡಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಪಶ್ಚಿಮದ ಕಡೆಯಿಂದ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿನಲ್ಲಿ ಪೂರ್ವ ದಿಕ್ಕಿನಲ್ಲಿ ಬದು ಇದೆ ಎಂದರೆ ಸರಿ. ಸಾಮಾನ್ಯವಾಗಿ ಒಡ್ಡು ಸ್ವಲ್ಪ ಎತ್ತರವಾಗಿ ಇರುತ್ತದೆ ಎಂದರೆ ಸರಿ. ದಾವಾ ಜಮೀನಿನ ಪೂರ್ವ ದಿಕ್ಕಿನಲ್ಲಿ ಸುಮಾರು 7-8 ಮೀಟರು ಅಗಲ ಒಡ್ಡು ಇದೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಒಡ್ಡು ಇರುವ ಬಗ್ಗೆ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಎಲ್ಲಾ ಹಿಸ್ಸೆಗಳು ತಾಗುತ್ತವೆ ಎಂದರೆ ಸರಿಯಲ್ಲ. ಸರ್ವೆ ಇಲಾಖೆಯಿಂದ ಆ ದಿನ ಇಬ್ಬರು ಬಂದಿದ್ದರು. ಅವರು ಅಳತೆ ಮಾಡುವ ಕಾಲಕ್ಕೆ ನಾನು ವಿವರಗಳನ್ನು ಬರೆದುಕೊಂಡಿಲ್ಲ. ಶಂಭಣ್ಣ ಎನ್ನುವವರ ಜಮೀನು ದಾವಾ

ಆಸ್ತಿಯ ಪಶ್ಚಿಮಕ್ಕೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ದಕ್ಷಿಣಕ್ಕೆ ಇದೆ ಎಂದು ನುಡಿಯುತ್ತಾರೆ. ನನ್ನ ಆಸ್ತಿ ಸರ್ವೆ ನಂ.98 ರ 5 ನೇ ಹಿಸ್ಸಾದಲ್ಲಿ ಸಹ ಬರುತ್ತದೆ ಎಂದರೆ ಸರಿಯಲ್ಲ. 5 ನೇ ಹಿಸ್ಸೆಯನ್ನು ಬಿಟ್ಟು ದಾವಾ ಜಮೀನನ್ನು ಅಳೆಯಲಾಗಿದೆ ಎಂದರೆ ಸರಿಯಲ್ಲ. ಮೋಜಣಿದಾರ ನನ್ನ ಸಂಬಂಧಿಕರಾಗಿದ್ದರಿಂದ ಹಿಸ್ಸಾದಾರರ ಅನುಪಸ್ಥಿತಿಯಲ್ಲಿ ಖೊಟ್ಟಿ ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಮೋಜಣಿದಾರರು ದಾವಾ ಆಸ್ತಿಯ ಪೂರ್ವಕ್ಕೆ ಇರುವ ಒಡ್ಡು ಮತ್ತು 5 ನೇ ಹಿಸ್ಸಾದಲ್ಲಿ ಜಮೀನು ಇರುವ ಕುರಿತು ನಿಪಿ-6 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೂರ್ವಕ್ಕೆ ಇರುವ ಒಡ್ಡು ಮತ್ತು 5 ನೇ ಹಿಸ್ಸಾದಲ್ಲಿ ಇರುವ ಆಸ್ತಿಯನ್ನು ಸೇರಿಸಿದರೆ ನಾನು ಹೊಂದಿದಂತಹ ಮಾಲೀಕತ್ವಕ್ಕಿಂತ ಹೆಚ್ಚು ಜಮೀನು ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನನ್ನು ಯಾರೂ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನಕಾಶೆಯನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಳತೆ ಕಾಲಕ್ಕೆ ಪ್ರತಿವಾದಿಯರು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಖೊಟ್ಟಿ ದಾಖಲೆ ಆಧಾರದ ಮೇಲೆ ಈ ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೂ ಸಹ ಒಡ್ಡು ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.